## ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
## ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ವಾಣಿ | ಪಿಡಬ್ಲ್ಯೂ.4 |
| ಗಂಡನ ಹೆಸರು | : | ತಿರುಮಲರೆಡ್ಡಿ | ಸಿಡಬ್ಲ್ಯೂ.6 |
| ವಯಸ್ಸು | : | 43 ವರ್ಷ | ಪ್ರಮಾಣ ವಚನ ಬೋಧಿಸಿದ |
| ಉದ್ಯೋಗ | : | ಎಫ್.ಡಿ.ಎ. ಉಪನಿರ್ದೇಶಕರ ಕಛೇರಿ, ಕೃಷಿ ಮಾರಾಟ ಇಲಾಖೆ, | ದಿನಾಂಕ: 15.03.2018 |
| ವಾಸಸ್ಥಳ | : | ಚಿತ್ರದುರ್ಗ | |

### ಎಸ್‌ಪಿಪಿ ರವರಿಂದ: ಮುಖ್ಯ ವಿಚಾರಣೆ:

ನಾನು ಕಳೆದ 4 ವರ್ಷಗಳಿಂದ ಚಿತ್ರದುರ್ಗದ ಉಪನಿರ್ದೇಶಕರ ಕಛೇರಿ, ಕೃಷಿ ಮಾರಾಟ ಇಲಾಖೆಯಲ್ಲಿ ಎಫ್.ಡಿ.ಎ ಅಂತಾ ಕೆಲಸ ಮಾಡುತ್ತಿದ್ದೇನೆ. ಆ ಸಮಯದಲ್ಲಿ ದಿ: 03.06.2014 ರಂದು ನಾನು ಕಛೇರಿಯಲ್ಲಿದ್ದಾಗ ನಮ್ಮ ಮೇಲಾಧಿಕಾರಿ ಲೋ. ಪೋಲೀಸ್ ಠಾಣೆಗೆ ಹೋಗಲು ತಿಳಿಸಿದರು . ಆ ಪ್ರಕಾರ ನಾನು ಅಂದು ಚಿತ್ರದುರ್ಗ ಲೋ ಕಛೇರಿಗೆ ಸಂಜೆ 5.00 ಗಂಟೆಗೆ ಹೋದೆನು . ಆ ಸಮಯದಲ್ಲಿ ಸಿಡಬ್ಲ್ಯೂ-7 ಮಂಜುನಾಥ ರೆಡ್ಡಿ ಪಂಚರಾಗಿ ಬಂದಿದ್ದರು . ಆ ವೇಳೆಯಲ್ಲಿ ಸಿಡಬ್ಲ್ಯೂ-72 ಸತ್ಯನಾರಾಯಣ ಇನ್ಸಪೆಕ್ಟರ್ ನಮ್ಮೆಲ್ಲರ ಪರಿಚಯ ಮಾಡಿಕೊಂಡರು, ಆಗ ನಾವು ಪಂಚರು ಒಬ್ಬರಿಗೊಬ್ಬರು ಪರಿಚಯ ಮಾಡಿಕೊಂಡೆವು. ಆ ವೇಳೆಯಲ್ಲಿ ಸಿಡಬ್ಲ್ಯೂ-72 ಸತ್ಯನಾರಾಯಣ ಇನ್ಸಪೆಕ್ಟರ್ ನಮಗೆ ನಿರ್ದೇಶನ ಕೊಟ್ಟು ನೀವು ನಾಳೆ ಬೆಳಿಗ್ಗೆ ಲೋ. ಠಾಣೆಗೆ ಬರಬೇಕು, ಒಂದು ಕಡೆ ರೇಡ್ ಮಾಡಲು ಹೋಗುವುದಿದೆ ಅಂತಾ ತಿಳಿಸಿದರು.

2. ಆ ಪ್ರಕಾರ ನಾನು, ಸಿಡಬ್ಲ್ಯೂ-7 ಮಂಜುನಾಥ ರೆಡ್ಡಿ ಕೂಡಿಕೊಂಡು ಲೋ. ಠಾಣೆಗೆ ದಿ: 04.06.2014 ರಂದು ಬೆಳಿಗ್ಗೆ 4.30 ಕ್ಕೆ ಹೋದೆವು. ಅಲ್ಲಿ ಸಿಡಬ್ಲ್ಯೂ-72

ಸತ್ಯನಾರಾಯಣ, ಇತರೆ ಪೋಲೀಸ್ ಅಧಿಕಾರಿ ಇದ್ದರು . ಆ ವೇಳೆಯಲ್ಲಿ ಸಿಡಬ್ಲ್ಯೂ–72 ಇವರು ನಮಗೆ ಇನ್ನೊಬ್ಬ ತನಿಖಾಧಿಕಾರಿಯಾದ ಗಂಗಲ್, ಇನ್ಸಪೆಕ್ಟರ್ ಪರಿಚಯ ಮಾಡಿಕೊಟ್ಟರು . ಆ ವೇಳೆಯಲ್ಲಿ ಗಂಗಲ್ ಇನ್ಸಪೆಕ್ಟರ್ ಜೊತೆಗೆ ಹೋಗಿ ಸಹಕರಿಸಲು ನಮಗೆ ಬೇರೆ ಅಧಿಕಾರಿಗಳು ತಿಳಿಸಿದರು . ಆ ಪ್ರಕಾರ ನಾನು, ಸಿಡಬ್ಲ್ಯೂ–7 ಮಂಜುನಾಥ ರೆಡ್ಡಿ ಗಂಗಲ್ ಇನ್ಸಪೆಕ್ಟರ್ ಕೂಡಿಕೊಂಡು ದಿಃ 04.06.2014 ರಂದು ಹಿರಿಯೂರು ತಾಲ್ಲೂಕು ಈಶ್ವರಗೆರೆ ಗ್ರಾಮದಲ್ಲಿರುವ ಆರೋಪಿ–1 ಇವರ ಅಣ್ಣ ಈರಣ್ಣ ಇವರ ಮನೆ ಹತ್ತಿರ ಹೋದೆವು . ಆಗ ಬೆಳಿಗ್ಗೆ 6.00 ಗಂಟೆಯಾಗಿತ್ತು .

3. ಆಗ ಗಂಗಲ್ ಇನ್ಸಪೆಕ್ಟರ್ ಆರೋಪಿ–1 ಇವರ ಅಣ್ಣನಿಗೆ ಬಂದ ವಿಷಯ ತಿಳಿಸಿ ಸರ್ಚ ವಾರೆಂಟ್ ತೋರಿಸಿದರು . ಸದರಿ ವಾರೆಂಟಿಗೆ ಆರೋಪಿ–1 ಇವರ ಅಣ್ಣ ಈರಣ್ಣ ಸಹಿ ಮಾಡಿದರು . ಆ ವಾರೆಂಟಿಗೆ ನಾನು, ಸಿಡಬ್ಲ್ಯೂ–7 ಸಹಿ ಮಾಡಿದ್ದೇವೆ. ಈಗ ತೋರಿಸಿದ ಸರ್ಚ ವಾರೆಂಟ್ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇದೆ. ಅದನ್ನು ನಿಪಿ–4 ಅಂತಾ ಸಾಕ್ಷಿಯ ಸಹಿಯನ್ನು ನಿಪಿ–4 ಎ ಅಂತಾ ಗುರುತಿಸಲಾಯಿತು. ಸಿಡಬ್ಲ್ಯೂ–7 ಇವರ ಸಹಿಯನ್ನು ನಿಪಿ–4 ಬಿ ಅಂತಾ ಗುರುತಿಸಲಾಯಿತು. ಅಂದು ಆರೋಪಿ–1 ಅಣ್ಣನ ಮನೆ ಮುಂದೆ ನಾವೆಲ್ಲಾ ಅಂಗಶೋಧನೆ ಮಾಡಿಕೊಂಡು ಮನೆಯ ಒಳಗಡೆ ಹೋದೆವು . ಆ ಮನೆಯಲ್ಲಿ ಪರಿಶೀಲನೆ ಮಾಡಿದಾಗ ಅಲ್ಲಿ ಯಾವುದೇ ಬೆಲೆಬಾಳುವ ವಸ್ತುಗಳು ಸಿಗಲಿಲ್ಲ. ಈ ಬಗ್ಗೆ ಪಂಚನಾಮೆ ಮಾಡಿರುತ್ತಾರೆ. ಅದರ ಮೇಲೆ ನನ್ನ ಸಹಿ ಇದೆ. ಅದನ್ನು ನಿಪಿ–5 ಅಂತಾ ಸಾಕ್ಷಿಯ ಸಹಿಯನ್ನು ನಿಪಿ–5 ಎ ಅಂತಾ ಗುರುತಿಸಲಾಯಿತು. ಸಿಡಬ್ಲ್ಯೂ–7 ಇವರ ಸಹಿಯನ್ನು ನಿಪಿ–5 ಬಿ ಅಂತಾ ಗುರುತಿಸಲಾಯಿತು.

4. ಅದೇ ದಿನ ಆರೋಪಿ–1 ಇವರ ಇನ್ನೊಬ್ಬ ಸಹೋದರ ರಾಮಣ್ಣ ಇವರ ಮನೆಯ ಹತ್ತಿರ ಹೋಗಿ ಅವರಿಗೆ ಸರ್ಚ್ ವಾರೆಂಟ್ ತೋರಿಸಿದೆವು. ಸದರಿ ವಾರೆಂಟಿಗೆ ಆರೋಪಿ–1 ಇವರ ಅಣ್ಣ ರಾಮಣ್ಣ ಸಹಿ ಮಾಡಿದರು . ಆ ವಾರೆಂಟಿಗೆ ನಾನು, ಸಿಡಬ್ಲ್ಯೂ–7 ಸಹಿ

ಮಾಡಿದ್ದೇವೆ. ಈಗ ತೋರಿಸಿದ ಸರ್ಚ ವಾರೆಂಟ್ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇದೆ. ಅದನ್ನು ನಿಪಿ–6 ಅಂತಾ ಸಾಕ್ಷಿಯ ಸಹಿಯನ್ನು ನಿಪಿ–6 ಎ ಅಂತಾ ಗುರುತಿಸಲಾಯಿತು. ಸಿಡಬ್ಲ್ಯೂ–7 ಇವರ ಸಹಿಯನ್ನು ನಿಪಿ–6 ಬಿ ಅಂತಾ ಗುರುತಿಸಲಾಯಿತು. ಅಂದು ಆರೋಪಿ–1 ಅಣ್ಣನ ಮನೆ ಮುಂದೆ ನಾವೆಲ್ಲಾ ಅಂಗಶೋಧನೆ ಮಾಡಿಕೊಂಡು ಮನೆಯ ಒಳಗಡೆ ಹೋದೆವು . ಆ ಮನೆಯಲ್ಲಿ ಪರಿಶೀಲನೆ ಮಾಡಿದಾಗ ಅಲ್ಲಿ ಒಂದು ಅಲ್ಮೇರಾ ಇತ್ತು. ಅದರ ಬಗ್ಗೆ ವಿಚಾರಿಸಿದಾಗ ಆರೋಪಿ–1 ಇವರ ಅಣ್ಣ ಅದು ಆರೋಪಿ–1 ಇವರಿಗೆ ಸಂಬಂಧಿಸಿದ್ದು ಅಂತಾ ತಿಳಿಸಿದರು. ಅಲ್ಮೇರಾದ ಬೀಗ ಸಿಗಲಿಲ್ಲ, ಕಮ್ಮಾರ ದಾಸಣ್ಣ ಇವರನ್ನು ಕರೆಸಿ ಅಲ್ಮೇರಾದ ಬೀಗ ತೆಗೆಸಿ ನೋಡಿದಾಗ ಅದರಲ್ಲಿ ಆರೋಪಿ–1, 2 ಇವರಿಗೆ ಸಂಬಂಧಿಸಿದ 13 ದಾಖಲೆ ಸಿಕ್ಕವು. ಅವುಗಳನ್ನು ತನಿಖಾಧಿಕಾರಿ ವಶಪಡಿಸಿಕೊಂಡರು. ಆ ವೇಳೆಯಲ್ಲಿ ಲೋ. ಪೋಲೀಸರು ಶೋಧನಾ ಪಂಚನಾಮೆ ಮಾಡಿರುತ್ತಾರೆ. ಅದರ ಮೇಲೆ ನನ್ನ ಸಹಿ ಇದೆ. ಅದನ್ನು ನಿಪಿ–7 ಅಂತಾ ಸಾಕ್ಷಿಯ ಸಹಿಯನ್ನು ನಿಪಿ–7 ಎ ಅಂತಾ ಗುರುತಿಸಲಾಯಿತು. ಸಿಡಬ್ಲ್ಯೂ–7 ಇವರ ಸಹಿಯನ್ನು ನಿಪಿ–7 ಬಿ ಅಂತಾ ಗುರುತಿಸಲಾಯಿತು.

## ಆರೋಪಿತರ ಪರ ಶ್ರೀ ಎಸ್.ಪಿ.ಹೆಚ್. ವಕೀಲರಿಂದಃ ಪಾಟೀ ಸವಾಲುಃ

5. ಪಂಚನಾಮೆ ಬರೆಯಲು ನಾನು ಸ್ವತಃ ಮಾಹಿತಿ ಕೊಟ್ಟಿಲ್ಲ . ಅಲ್ಲಿ ದೊರೆತಂತಹ ರಸೀದಿಗಳ ಮೇಲೆ ಕಾಣುವ ಮೊತ್ತವನ್ನು ಮಹಜರಿನಲ್ಲಿ ಬರೆದಿದ್ದಾರೆ . ಆ ರಸೀದಿಗಳ ಬಗ್ಗೆ ವಿಚಾರಿಸಿದಾಗ ಆರೋಪಿ–1 ಇವರ ಅಣ್ಣ ರಾಮಣ್ಣ ಇವರು ಅವುಗಳ ಬಗ್ಗೆ ನನಗೆ ಗೊತ್ತಿಲ್ಲ ಅಂತಾ ಹೇಳಿದರು . ನಿಪಿ–7 ಮಹಜರಿನ ಐಟಂ ನಂ. 2 ರೂ. 7195/–, ಐಟಂ ನಂ. 6 ರೂ. 41,400/–, ಐಟಂ ನಂ. 12 ರೂ. 160/– ಇವುಗಳನ್ನು ನಾನೇ ಕಟ್ಟಿದ್ದೇನೆ ಅಂತಾ ರಾಮಣ್ಣ ನಮ್ಮ ಮುಂದೆ ಹೇಳಿದನು ಅನ್ನುವುದು ಸುಳ್ಳು. ಆ ರೀತಿ ಹೇಳಿದ್ದರೂ ಕೂಡಾ

ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ . ಅಲ್ಲಿ ಇದ್ದಂತಹ ಅಲ್ಮೇರಾ ಆರೋಪಿ–1 ರಾಜಣ್ಣನದ್ದು ಅಂತಾ ರಾಮಣ್ಣ ಹೇಳಿಲ್ಲ ಅನ್ನುವುದು ಸುಳ್ಳು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿತ್ರದುರ್ಗ.**

**ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ**
**ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಮಹಮದ್ ಅಸ್ಲಂ | **ಪಿಡಬ್ಲ್ಯೂ.3** |
| **ತಂದೆಯ ಹೆಸರು** | : | ಕರೀಂ ಸಾಬ್ | **ಸಿಡಬ್ಲ್ಯೂ.5** |
| **ವಯಸ್ಸು** | : | **50 ವರ್ಷ** | **ಪ್ರಮಾಣ ವಚನ ಬೋಧಿಸಿದ** |
| **ಉದ್ಯೋಗ** | : | ಬಡಗಿ ಕೆಲಸ | **ದಿನಾಂಕ: 15.03.2018** |
| **ವಾಸಸ್ಥಳ** | : | ಆಜಾದ್ ನಗರ, ಚಿತ್ರದುರ್ಗ | |

## ಎಸ್‌ಪಿಪಿ ರವರಿಂದ: ಮುಖ್ಯ ವಿಚಾರಣೆ:

ಆರೋಪಿ–1, 2 ನನಗೆ ಗೊತ್ತಿರುತ್ತಾರೆ. ಕಳೆದ 40 ವರ್ಷದಿಂದ ನಾನು ಚಿತ್ರದುರ್ಗ ಪಟ್ಟಣದಲ್ಲಿ ಬಡಗಿ ಕೆಲಸ ಮಾಡುತ್ತಾ ಬಂದಿರುತ್ತೇನೆ ಕಟ್ಟಿಗೆ ನೋಡಿದರೆ ಅದರ ಜಾತಿ ವಿವರ ನಾನು ಹೇಳುತ್ತೇನೆ. ಹೀಗಾಗಿ ನನಗೆ ಕಟ್ಟಿಗೆಯಲ್ಲಿ ಅನುಭವ ಇದೆ. ದಿ: 04.06.2014 ರಂದು ಲೋ. ಪೋಲೀಸರು ನನ್ನನ್ನು ಆರೋಪಿತರು ವಾಸವಾಗಿದ್ದ ಚಿತ್ರದುರ್ಗ ನಗರದ ಯಂಗಮ್ಮನಕಟ್ಟೆ ಹತ್ತಿರ ಇರುವ ಮನೆಗೆ ಕರೆಸಿದ್ದರು. ಆ ಪ್ರಕಾರ ನಾನು ಆರೋಪಿತರ ಮನೆಗೆ ಹೋಗಿದ್ದೆನು. ಅಲ್ಲಿ ಲೋ. ಪೋಲೀಸರು ಆರೋಪಿತರು ವಾಸವಾಗಿದ್ದ ಮನೆಯನ್ನು ಪರಿಶೀಲನೆ ಮಾಡಿ ತನಿಖೆ ಮಾಡುತ್ತಿದ್ದರು. ಆ ವೇಳೆಯಲ್ಲಿ ಆರೋಪಿತರು ವಾಸವಾಗಿದ್ದ ಮನೆಯಲ್ಲಿ ಬಳಸಿದ ಕಿಟಕಿ, ಬಾಗಿಲು, ಕಟ್ಟಿಗೆ ವಸ್ತುಗಳ ಬಗ್ಗೆ ಲೆಕ್ಕಾಚಾರ ಮಾಡಲು ನನಗೆ ಹೇಳಿದರು. ಆ ಪ್ರಕಾರ ನಾನು ಮನೆಯಲ್ಲಿ ಬಳಸಿದ ಕಟ್ಟಿಗೆ ವಸ್ತುಗಳ ಬಗ್ಗೆ ಲೆಕ್ಕಾಚಾರ ಮಾಡಿ ಅವುಗಳ ಬೆಲೆಯನ್ನು ಲೋ. ಪೋಲೀಸರ ಮುಂದೆ ಹೇಳಿದ್ದೇನೆ.

2. ಮನೆಯ ತಲೆಬಾಗಿಲು, ದೇವರ ಮನೆ ಬಾಗಿಲು ಟೀಕ್ ಮರದ್ದಾಗಿತ್ತು, ಉಳಿದ ಕಿಟಕಿ ಬಾಗಿಲುಗಳು ಸಾಧಾ ಕಟ್ಟಿಗೆಯದ್ದಾಗಿತ್ತು. ಬೆಡ್ ರೂಂನಲ್ಲಿ ತೇಗದ ಮರದ 2 ಕುರ್ಚಿ, 1 ಸೋಫಾ, 1 ಟೀಪಾಯಿ ಇದ್ದವು. ಸದರಿ ಮರಗಳ ವಿವರವನ್ನು ನಾನು ಲೋ. ಪೋಲೀಸರ ಮುಂದೆ ಹೇಳಿದೆನು. ಅವುಗಳನ್ನು ನಿಪಿ–2 ಮಹಜರಿನಲ್ಲಿ ಬರೆದಿದ್ದಾರೆ. ಆ

ವಸ್ತುಗಳ ಮುಂದೆ ಬೆಲೆಯನ್ನು ಕೂಡ ನಮೂದು ಮಾಡಿದ್ದಾರೆ . ನಿಪಿ–2 ಮಹಜರಿಗೆ ನಾನು ಸಹಿ ಮಾಡಿದ್ದೇನೆ. ಸಾಕ್ಷಿಯ ಸಹಿಯನ್ನು ನಿಪಿ–2 ಸಿ ಅಂತಾ ಗುರುತಿಸಲಾಯಿತು. ಈ ಬಗ್ಗೆ ನಾನು ತನಿಖಾಧಿಕಾರಿ ಮುಂದೆ ಹೇಳಿಕೆ ನೀಡಿರುತ್ತೇನೆ.

**ಆರೋಪಿತರ ಪರ ಶ್ರೀ ಎಸ್.ಪಿ.ಹೆಚ್. ವಕೀಲರಿಂದಃ ಪಾಟೀ ಸವಾಲುಃ**

3. ನಿಪಿ–2 ಮಹಜರಿನಲ್ಲಿ ಬರೆದಿರುವ ಕಟ್ಟಿಗೆ ವಸ್ತುಗಳ ಅಂದರೆ ಕಿಟಕಿ, ಬಾಗಿಲು ಬೆಲೆಯನ್ನು ನಾನು ಹೇಳಿರುವುದಿಲ್ಲ . ಆದರೆ ಸೋಫಾ, ಮಂಚ, ಕುರ್ಚಿ ಬೆಲೆಯನ್ನು ಹೇಳಿದ್ದೇನೆ. ಅವುಗಳ ಬೆಲೆಯನ್ನೂ ಕೂಡಾ ನಾನು ಹೇಳಿಲ್ಲ ಅನ್ನುವುದು ಸುಳ್ಳು. ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಅನ್ನುವುದು ಸುಳ್ಳು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿತ್ರದುರ್ಗ.**